<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

<u>ಸಿಸಿ ನಂ.**908/2022**</u>

ಚಾಸಾ-10 ಫ್ರಾಸಾ-05

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣೀಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 12.02.2025

| | | |
|---|---|---|
| ಹೆಸರು | : | ಸೈಫನಸಾಬ |
| ತಂದೆಯ ಹೆಸರು | : | ಗುಲಾಬಸಾಬ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸಸ್ಥಳ | : | ಪುನಾ (MH) |

-: <u>ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-</u>

ಚಾಸಾ-1 ನನ್ನ ಅತ್ತಿಗೆ, ಚಾಸಾ-2,8 ಮತ್ತು 9 ರವರ ಪರಿಚಯ ಇರುತ್ತದೆ. ಚಾಸಾ-11 ಮತ್ತು 12 ನನ್ನ ಅಣ್ಣನ ಮಕ್ಕಳು ಇರುತ್ತಾರೆ. ಮೃತ ಇಸ್ಮಾಯಿಲ ನನ್ನ ಅಣ್ಣನಾಗಬೇಕು.

ನಾನು ಪುನಾದಲ್ಲಿ ಇದ್ದಾಗ ಚಾಸಾ-2 ರವರು ನನಗೆ ದೂರವಾಣಿ ಕರೆ ಮಾಡಿ ತಿಳಿಸಿದ್ದೇನೆಂದರೆ, ನಿಮ್ಮ ಅಣ್ಣನಿಗೆ ರಸ್ತೆ ಅಪಘಾತವಾಗಿದ್ದು, ಆದ್ದರಿಂದ ನೀನು ಬರಬೇಕು ಅಂತಾ ಹೇಳಿರುತ್ತಾರೆ. ತದ ನಂತರ ನಾನು ಊರಿಗೆ ಬಂದು ವಿಚಾರಿಸಿದಾಗ ಮೃತ ನನ್ನ ಅಣ್ಣ ಇಸ್ಮಾಯಿಲ ಸದರಿ ಅಪಘಾತದ ಸ್ಥಳದಲ್ಲಿ ಮೃತಪಟ್ಟಿರುತ್ತಾರೆ ಎಂದು ಗೊತ್ತಾಯಿತು. ಸದರಿ ಅಪಘಾತದ ಕುರಿತು ವಿಚಾರಿಸಿದಾಗ ನಮ್ಮ ಅಣ್ಣ ಕಲಬುರರಿಗೆ ರಾಶಿ ಮಿಶನ್ ಖರೀದಿಸಲು ಹೋಗಿದ್ದು, ಆ ದಿನ ಮರಳಿ ಬರುವಾಗ ರಸ್ತೆಯ ಮೇಲೆ ಅಜಾಕ್ರತೆಯಿಂದ ಯಾವುದೇ ಸೂಚನೆ ನೀಡದೆ ರಸ್ತೆಯ ಮೇಲೆ ಟ್ರ್ಯಾಕ್ಟರ ನಿಲ್ಲಿಸಿದು, ಸದರಿ ಟ್ರ್ಯಾಕ್ಟರಗೆ ಮೃತ ನನ್ನ ಅಣ್ಣ ಬಂದು ಡಿಕ್ಕಿ ಪಡಿಸಿರುತ್ತಾನೆ. ಸದರಿ ಅಪಘಾತವು ಟ್ರ್ಯಾಕ್ಟರನ ಚಾಲಕ ಅಂಬರೀಶ ಇತನ ನಿಶ್ಕಾಳಜಿ ತನದಿಂದ ಸದರಿ ಅಪಘಾತವಾಗಿರುತ್ತದೆ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

ಪಾಟೀ ಸವಾಲುಃ ಸ.ಸ.ಅ. ರವರಿಂದ

ದಿಃ10.10.2020 ರಂದು ನಾನು ಸದರಿ ಅಪಘಾತವು ಟ್ರ್ಯಾಕ್ಟರ ಚಾಲಕನ ನಿಶ್ಕಾಳಜಿ ತನದಿಂದ ಅಪಘಾತವಾಗಿದೆ ಎಂದು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ಶ್ರೀ **SGA** ವಕೀಲರಿಂದಃ-

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಪ್ರಸುತ್ತ ನಾನು ಪುಣೆಯಲ್ಲಿ ಗುತ್ತಿಗೆದಾರ ಅಂತಾ ಕೆಲಸ ಮಾಡುತ್ತಿದ್ದೇನೆ. ಆ ದಿನ ಸಾಯಂಕಾಲ 07.00 ಗಂಟೆಗೆ ದೂರವಾಣಿ ಕರೆ ಬಂದಿರುತ್ತದೆ. ನಾನು ಪೋಲಿಸರ ಮುಂದೆ ಹೇಳಿಕೆಯನ್ನು ನಮ್ಮ ಗ್ರಾಮವಾದ ಜೇವರ್ಗಿಯಲ್ಲಿ ನೀಡಿರುತ್ತೇನೆ. ನಾನು ಹೇಳಿಕೆ ನೀಡುವ ಸಮಯದಲ್ಲಿ ಚಾಸಾ-2 ರವರು ಮತ್ತು ಬಾಬು ಖಸಗಿ ಎನ್ನುವವರು ಸಹ ಇದ್ದರು. ನಾನು ನೀಡಿದ ಹೇಳಿಕೆಯನ್ನು ಓದಿ ನೋಡಿದ್ದು, ಪೋಲಿಸರು ನನ್ನ ಹೇಳಿಕೆಯನ್ನು ತಪ್ಪಾಗಿ ಬರೆದಿರುತ್ತಾರೆ. ಮೃತ ಇಸ್ಮಾಯಿಲ ನನ್ನ ಸಹೋದರ ಆಗಿದ್ದರಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ **- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ